

ಮಕ್ಕಳನ್ನು ಕೇಂದ್ರೀಕರಿಸಿಕೊಂಡು ನಮ್ಮ ಮನೆಯಷ್ಟೇ ರೂಪುಗೊಂಡರೆ ಸಾಲದು. ಮಕ್ಕಳನ್ನೇ ಕೇಂದ್ರೀಕರಿಸಿಕೊಂಡು ಸಮಾಜವನ್ನೂ ವ್ಯವಸ್ಥೆಯನ್ನೂ ಸಜ್ಜುಗೊಳಿಸಬೇಕು.

■ ಸ್ವಯಂಪ್ರಭಾ

# ಮಗು ಎಂದರೆ ಆದು ಎಲ್ಲರ ಸಂಭ್ರಮ

ಮನೆಗೆ ಮಗುವೊಂದು ಬರುತ್ತದೆ ಎನ್ನುವುದು ಶುಭಸುದ್ದಿಯಲ್ಲದೆ ಮತ್ತೇನು? ಮಗುವಿನ ಆಗಮನಕ್ಕಾಗಿ ವರ್ಷಕ್ಕೆ ಮುನ್ನವೇ ತಯಾರಿಗಳು ಶುರುವಾಗುತ್ತವೆ. ಅವಳು ಗರ್ಭವತಿಯಾಗಿರುವ ಸುದ್ದಿ ನಿಕ್ಕಿಯಾಗುವ ಮುನ್ನವೇ, ಅಂದರೆ ಮಗುವನ್ನು ಹೊಂದುವ ನಿರ್ಧಾರ ಮಾಡಿದ ಕೂಡಲೇ ದಂಪತಿಯ ಆಲೋಚನೆ, ಮನೆಯವರ ಆಲೋಚನೆಯ ಶೈಲಿಯೇ ಬದಲಾಗಿಬಿಡುತ್ತದೆ. ಸಣ್ಣ ಶಾಪಿಂಗ್ ಸಂದರ್ಭದಲ್ಲಿಯೂ, 'ಮಗು ಬರಲಿದೆ, ಈ ಡೆಲಿಕೇಟ್ ಸಾಮಾನು ಬೇಡ', 'ಮಗು ಬರಲಿದೆ ಮೆಟ್ಟಿಲುಗಳಿಗೆ ಗೇಟ್ ಹಾಕಿಸುವ ಬಗ್ಗೆ ಅಂದಾಜು ವೆಚ್ಚ ಎಷ್ಟಾಗುತ್ತದೆ ಎಂದು ಈಗಲೇ ವಿಚಾರಿಸಬೇಕು...' – ಹೀಗೆ ಪ್ರತಿ ಯೋಚನೆಯ ಕೇಂದ್ರದಲ್ಲಿ ಮಗುವೇ ಇರುತ್ತದೆ. ಬೆಳ್ಳನೆ ಸೂರ್ಯ ಹುಟ್ಟುವ ಮುನ್ನವೇ ಆಕಾಶ ಹೊಂಬಣ್ಣದಿಂದ ರಂಗೇರುವುದಿಲ್ಲವೇ ಹಾಗೆಯೇ ಮನೆ ಮನಸ್ಸುಗಳ ತುಂಬ ಲವಲವಿಕೆಯ ಬಣ್ಣ.

ಆದರೆ ಎಲ್ಲ ಕಾಲದಲ್ಲಿಯೂ ಎಲ್ಲ ಮನೆಗಳಲ್ಲಿಯೂ ಪರಿಸ್ಥಿತಿ ಹೀಗಿರುವುದಿಲ್ಲ. ಹಿಂದಿನ ಕಾಲದಲ್ಲಿ, ಅಂದರೆ ಬಡತನವು ಇನ್ನಷ್ಟು ತೀವ್ರವಾಗಿದ್ದ ಕಾಲದಲ್ಲಿ ಬಸುರಿಯ ಆರೈಕೆ, ಶಿಶುವಿನ ಆರೈಕೆಗೆ ಪುರುಸೊತ್ತೂ ಇರಲಿಲ್ಲ. ಸದಾ ದುಡಿಮೆಗೆ ಹೆಗಲೊಡ್ಡಿ ಬಾಳುವೆ ಮಾಡುವಾಗ, ಮಗುವನ್ನು ತೆಕ್ಕೆಯಲ್ಲಿಟ್ಟು ಜೋಪಾನ ಮಾಡುವುದಾದರೂ ಹೇಗೆ? ಮಕ್ಕಳ ನಡುವೆ ಅಂತರ ಕಾಪಾಡಿಕೊಳ್ಳಬೇಕು ಎಂಬ ಅರಿವಾಗಲೀ, ಸಾಧ್ಯತೆಗಳಾಗಲೀ ಇಲ್ಲದೇ ಇದ್ದಾಗ ಹುಟ್ಟುವ ಮಕ್ಕಳ ಬಗ್ಗೆ ಸಂಭ್ರಮ ಪಡುವುದು ಎಲ್ಲರಿಂದಲೂ ಸಾಧ್ಯವಾಗುತ್ತಿರಲಿಲ್ಲ. ವ್ಯವಸ್ಥೆ ಒದಗಿಸುವ ಆರೋಗ್ಯ ಸೇವೆಯ ವ್ಯಾಪ್ತಿಯೂ ಬಹಳ ಚಿಕ್ಕದಾಗಿತ್ತು. ಹಾಗಾಗಿ ಹುಟ್ಟಿದ ಮಕ್ಕಳೆಲ್ಲವೂ ಬದುಕಿ ಉಳಿಯುತ್ತಿರಲಿಲ್ಲ. ಆದರೆ ಆಹಾರ–ವೈದ್ಯಕೀಯ ಕ್ಷೇತ್ರದಲ್ಲಿ ಆದ ಬದಲಾವಣೆ ಪರಿಸ್ಥಿತಿಯನ್ನು ಬದಲಿಸಿದೆ.

ಮಕ್ಕಳ ವಿಷಯದಲ್ಲಿ ಜಾಗತಿಕವಾಗಿ ಒಂದು ಒಳ್ಳೆಯ ಸುದ್ದಿ ಇದೆ. ಐದು ವರ್ಷದೊಳಗಿನ ಮಕ್ಕಳ ಸಾವಿನ ಪ್ರಮಾಣ ಅರ್ಧಕ್ಕರ್ಧ ಕಡಿಮೆಯಾಗಿದೆ. 1990ರಲ್ಲಿ ಈ ವಯಸ್ಸಿನೊಳಗಿನ ಮಕ್ಕಳ ಸಾವಿನ ಪ್ರಮಾಣ 12.5 ಮಿಲಿಯನ್ ಇತ್ತು. ಮೊದಲ ವರ್ಷದ ಹುಟ್ಟುಹಬ್ಬವನ್ನು ಕಾಣುವ ಮುನ್ನವೇ ಮಕ್ಕಳು ತೀರಿಕೊಳ್ಳುವುದೆಂದರೆ ಅದೆಷ್ಟು ದಾರುಣ! ಈ ಸಂಖ್ಯೆ 2019ರಲ್ಲಿ 5.2 ಮಿಲಿಯನ್‌ಗೆ ಇಳಿದಿದೆ ಎನ್ನುತ್ತಿದೆ, 5 ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣದ ಅಂದಾಜು ಮಾಡಿರುವ ವಿಶ್ವ ಆರೋಗ್ಯ ಸಂಸ್ಥೆ, ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ವ್ಯವಹಾರ ವಿಭಾಗದ ಜನಸಂಖ್ಯೆ ಘಟಕ, ಹಾಗೂ ವಿಶ್ವ ಬ್ಯಾಂಕ್ ಬಿಡುಗಡೆ ಮಾಡಿರುವ ವರದಿಯಲ್ಲಿ ಇಳಿಕೆಯಾಗಿರುವುದನ್ನು ಗುರುತಿಸಲಾಗಿದೆ.

ಕಳೆದ 30 ವರ್ಷಗಳಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಆಗಿರುವ ಸುಧಾರಣೆಗಳು ಇದಕ್ಕೆ ಕಾರಣ. ಅವಧಿಗೆ ಮುನ್ನ ಜನನ, ಕಡಿಮೆ ತೂಕ, ಹೆರಿಗೆ ಸಂದರ್ಭದಲ್ಲಿ ತೊಂದರೆ, ನ್ಯೂಮೋನಿಯಾ, ಅತಿಸಾರ, ಮಲೇರಿಯಾ – ಹೀಗೆ ತಡೆಯಬಹುದಾದ ಸಮಸ್ಯೆಗಳಿಂದಲೇ ಹಿಂದೆಲ್ಲ ಮಕ್ಕಳು ಅಸು ನೀಗುತ್ತಿದ್ದರು. ಈಗ ಚುಚ್ಚುಮದ್ದು ಲಭ್ಯತೆ, ಆರೋಗ್ಯ ಕ್ಷೇತ್ರದಲ್ಲಿ ಸರ್ಕಾರಗಳು ರೂಪಿಸಿದ ಯೋಜನೆಗಳು, ಈ ಲೋಕದ ಮಕ್ಕಳನ್ನು ರಕ್ಷಿಸುತ್ತಿವೆ ಎನ್ನಬೇಕು.

2020ರಲ್ಲಿಯೂ ಪರಿಸ್ಥಿತಿ ಹೀಗೆ ಸುಧಾರಣೆಯ ಹಳಿಗಳ ಮೇಲೆಯೇ ಸಾಗುತ್ತದೆ ಎನ್ನುವಂತಿಲ್ಲ. ಕೋವಿಡ್ ಸೋಂಕು ಹೆಚ್ಚಿನ ದೇಶಗಳ ಆರೋಗ್ಯ ವ್ಯವಸ್ಥೆಯನ್ನೇ ಹದಗೆಡಿಸಿದೆ. ವಿಶ್ವಆರೋಗ್ಯ ಸಂಸ್ಥೆಯ ಪ್ರಕಾರ, 105 ದೇಶಗಳ ಪೈಕಿ ಶೇ. 52 ದೇಶಗಳಲ್ಲಿ ಮಕ್ಕಳಿಗೆ ಒದಗಿಸುವ ಆರೋಗ್ಯ ಸೇವೆಗಳಲ್ಲಿ ಅವ್ಯವಸ್ಥೆಯುಂಟಾಗಿದೆ. ಶೇ. 51ರಷ್ಟು ದೇಶಗಳಲ್ಲಿ ಪೌಷ್ಟಿಕಾಂಶ ನಿರ್ವಹಣೆಯಲ್ಲಿ ತೊಡಕಾಗಿದೆ. ಸೋಂಕಿನ ಭೀತಿಯು ವೈದ್ಯರನ್ನು ಆಸ್ಪತ್ರೆಗಳಿಂದ ದೂರವಿರಿಸಿದೆ. 5 ವರ್ಷದೊಳಗಿನ ಪುಟ್ಟ ಕಂದಮ್ಮಗಳನ್ನು ಆಸ್ಪತ್ರೆಗೆ ಕರೆದೊಯ್ಯಲು ಪಾಲಕರು ಭಯಪಡುತ್ತಿದ್ದಾರೆ. ಗರ್ಭಿಣಿಯರು ಹೆರಿಗೆಗೆ ಆಸ್ಪತ್ರೆಗೆ ತೆರಳಲು ಅಳುಕುತ್ತಿದ್ದಾರೆ. ಆಸ್ಪತ್ರೆಗೆ ತೆರಳಿದರೂ, ಅಲ್ಲಿ ವಿಶ್ವಾಸ ಮೂಡಿಸುವ ಆರೋಗ್ಯ ಸೇವೆ ದೊರೆಯುತ್ತದೆ ಎನ್ನುವ ಖಾತರಿ ಇಲ್ಲವಾಗಿದೆ. ಇದು ಪುಟ್ಟ ಮಕ್ಕಳ ಕ್ಷೇಮಕ್ಕೆ ಪೂರಕವಾದ ವಿಷಯವಲ್ಲ ಎಂದು ಯುನಿಸೆಫ್‌ನ ಕಾರ್ಯನಿರ್ವಾಹಕ ನಿರ್ದೇಶಕಿ ಹೆನ್ರಿಟಾ ಫೋರ್ ಆತಂಕ ವ್ಯಕ್ತಪಡಿಸಿದ್ದಾರೆ.

ಈ ಆತಂಕವನ್ನು ದೂರ ಮಾಡುವ ಸಾಮರ್ಥ್ಯ ವೈದ್ಯರಿಗಿದೆ. ಮಕ್ಕಳು ನಮ್ಮ ಭವಿಷ್ಯ ಎನ್ನುವುದು ಹಳೆಯ ಗಾದೆ. ಅವರೇ ನಮ್ಮ ಬದುಕಿನ ಕೇಂದ್ರಬಿಂದು ಎಂದಮೇಲೆ, ಅವರೇ ನಮ್ಮ ಬದುಕಿನ ವರ್ತಮಾನ ಅಲ್ಲವೆ? ಜೀವಚಕ್ರವು ಮುಂದುವರೆಯಬೇಕಾದರೆ, ಈ ಪುಟ್ಟ ಕಂದಮ್ಮಗಳು ಕ್ಷೇಮವಾಗಿರಬೇಕು. ಅದಕ್ಕಾಗಿ ಹೊಸ ಜೀವವನ್ನು ಬರಮಾಡಿಕೊಳ್ಳುವ ನಿಟ್ಟಿನಲ್ಲಿ ಸಹಾಯ ಮಾಡಲು ತಾವು ಸಿದ್ಧರಿದ್ದೇವೆ ಎನ್ನುವುದನ್ನು ವೈದ್ಯರು ಮುಕ್ತವಾಗಿ ಮತ್ತು ಗಟ್ಟಿದನಿಯಲ್ಲಿ ಹೇಳಬೇಕಾಗಿದೆ. ಅಮ್ಮನಾಗಲು ಸಿದ್ಧರಾದವರ ಮನಸ್ಸಿನಲ್ಲಿ ಭದ್ರತೆಯ ಭಾವವನ್ನು ಮೂಡಿಸಬೇಕಾಗಿದೆ. ಯಾವುದೋ ಆತಂಕದಿಂದ ತಮ್ಮ ಕಂದಮ್ಮಗಳನ್ನು ಕಂಕುಳಲ್ಲಿ ಇರಿಸಿಕೊಂಡವರ ಮನಸ್ಸಿನಲ್ಲಿ ಭರವಸೆ ಮೂಡಿಸಬೇಕಾಗಿದೆ. ಇಷ್ಟಕ್ಕೂ ಅಂಕಿಅಂಶಗಳಲ್ಲಿ ಇಳಿಕೆ ಕಂಡುಬಂದರೂ, 5.2 ಮಿಲಿಯನ್ ಮಕ್ಕಳು ಸಾವನ್ನಪ್ಪುತ್ತಿದ್ದಾರೆ ಎನ್ನುವುದನ್ನು ಗಮನಿಸಲೇಬೇಕು. ಆ ಬಗ್ಗೆ ನಮ್ಮಲ್ಲಿ ಪಶ್ಚಾತ್ತಾಪದ ಎಳೆಯಿರಲೇಬೇಕು. ಹಾಗಾಗಿ ಮಕ್ಕಳನ್ನು ಕೇಂದ್ರೀಕರಿಸಿಕೊಂಡು ನಮ್ಮ ಮನೆಯಷ್ಟೇ ರೂಪುಗೊಂಡರೆ ಸಾಲದು. ಮಕ್ಕಳನ್ನೇ ಕೇಂದ್ರೀಕರಿಸಿಕೊಂಡು ಸಮಾಜವನ್ನೂ ವ್ಯವಸ್ಥೆಯನ್ನೂ ಸಜ್ಜುಗೊಳಿಸುವುದು ನಮ್ಮ ಕರ್ತವ್ಯ. ■